

ಕಂಭದ ಮೇಲಿನ ಹುಲಿ ನೃತ್ಯ

ಕೋರುತ್ತಾರೆ. ಹೊಸ ವರ್ಷದ ಮೊದಲ ದಿನದ ಮಧ್ಯಾಹ್ನದ ಹಾಗೂ ರಾತ್ರಿಯ ಊಟಗಳು ಕೂಡ ಕುಟುಂಬದ ಎಲ್ಲ ಸದಸ್ಯರೂ ಒಡಗೂಡಿ ಸೇವಿಸುತ್ತಾರೆ. ಸಂಪತ್ತು, ಯಶಸ್ಸು ಮತ್ತು ಯುವ ಚೈತನ್ಯಗಳನ್ನು ಪ್ರತಿನಿಧಿಸುವ ವಿಶೇಷ ಭಕ್ಷ್ಯಗಳಾದ ಹೆರೆದ ತಾಜಾ ಮೀನು ಮತ್ತು ವೈವಿಧ್ಯಮಯ ತರಕಾರಿಗಳನ್ನು ಒಳಗೊಂಡ 27 ಪದಾರ್ಥಗಳಿಂದ ಮಾಡಿದ ಯೀ ಸಾಂಗ (Yee Sang) ಅಥವಾ ಯು ಶೆಂಗ್ (Yu Sheng)ನ್ನು ಕುಟುಂಬದ ಸದಸ್ಯರೆಲ್ಲ ಚಾಪ್‌ಸ್ಟಿಕ್‌ಗಳ (chopsticks) ಸಹಾಯದಿಂದ ಟಾಸ್ ಮಾಡುತ್ತಾರೆ. ಇದು ವಿಶೇಷವಾಗಿ ಸಿಂಗಾಪುರದಲ್ಲಿ ಹಲವು ದಶಕಗಳಿಂದ ಪಾಲಿಸಿಕೊಂಡು ಬಂದ ಪದ್ಧತಿ. ಇದನ್ನು 'ಯಶಸ್ಸಿನ ಟಾಸ್' (Prosperity Toss) ಎಂದು ಕರೆಯುತ್ತಾರೆ.

ಸಂಜೆಯ ಹೊತ್ತು ವೈವಿಧ್ಯಮಯ ಮನರಂಜನೆಯ ಕಾರ್ಯಕ್ರಮಗಳು, ಮೆರವಣಿಗೆಗಳು ಹಾಗೂ ಬೆಳಕಿನ ಪಟಾಕಿಗಳ ಸಂಭ್ರಮ. ವಸಂತೋತ್ಸವದ ಹಬ್ಬದ ವಾತಾವರಣ 15 ದಿನಗಳವರೆಗೆ ನಡೆಯುತ್ತದೆ. ಎರಡನೇ ದಿನ, ಸಂಪತ್ತಿನ ಅಧಿದೇವತೆಯ ಪೂಜೆ ನಡೆದರೆ, ಏಳನೇ ದಿನ ಮನುಕುಲದ ಹುಟ್ಟುಹಬ್ಬದ ದಿನಾಚರಣೆ ನಡೆಯುತ್ತದೆ. ಹದಿನೈದನೇ ದಿನ ಪ್ರಕಾಶಮಾನವಾದ ಸುಂದರ ಕಂದೀಲುಗಳನ್ನು, ಹವೆಯಲ್ಲಿ ಹಾರಿ ಬಿಡುವುದು ಅಥವಾ ನದಿ ಇಲ್ಲವೇ ಸಮುದ್ರಗಳಲ್ಲಿ ತೇಲಿಬಿಡುವುದರೊಂದಿಗೆ ಸಾಂಪ್ರದಾಯಿಕವಾಗಿ ಕೊನೆಗೊಳ್ಳುತ್ತದೆ.

ಹದಿನೈದನೇ ದಿನವನ್ನು, ಲಾಂದ್ರದ ಉತ್ಸವ (lantern festival) ಎಂದು ಕರೆಯುತ್ತಾರೆ. ಹಬ್ಬಕ್ಕಾಗಿಯೇ ವಿಶೇಷವಾಗಿ ತಯಾರಿಸಲಾದ ಅಕ್ಕಿ ಹಿಟ್ಟಿನ, ಮೋದಕಗಳನ್ನು ಹೋಲುವ ಖಾದ್ಯ ಹಾಗೂ ಮುದ್ದೆಯಾಗುವಂಥ ಅಂಟಾದ ಅನ್ನದ ಉಂಡೆಗಳನ್ನು ಊಟದಲ್ಲಿ ಬಡಿಸುತ್ತಾರೆ.

ಸಿಂಗಾಪುರದಲ್ಲಿ ಕಳೆದ 45 ವರ್ಷಗಳಿಂದ, ಹೊಸ ವರ್ಷದ ಮೊದಲನೆಯ ವಾರಾಂತ್ಯಕ್ಕೆ ರಾಷ್ಟ್ರೀಯ ಹಬ್ಬವೆಂದೇ ಪ್ರಸಿದ್ಧಿಯಾದ ಚಿಂಗೇ (Chingay) ಮೆರವಣಿಗೆಯನ್ನು ಸಂಘಟಿಸಲಾಗುತ್ತದೆ. ಈ ಮೆರವಣಿಗೆಯಲ್ಲಿ, ಸಾಲಂಕೃತ ತೆಪ್ಪಗಳು, ಡ್ರ್ಯಾಗನ್ ಮತ್ತು ಸಿಂಹದ ನೃತ್ಯಗಳು, ಗಣೆಗಳ ಮೇಲೆ ನಡೆಯುವವರು, ಸಾಂಪ್ರದಾಯಿಕ ವೇಷಭೂಷಣಗಳನ್ನು ಧರಿಸಿದ ಪ್ರದರ್ಶನಕಾರರು, ಸಂಗೀತ – ನೃತ್ಯ ವೃಂದಗಳು, ವೂಷು ಪಟುಗಳ ಪ್ರದ್ರಶನಗಳನ್ನು ನೋಡಲು ದೇಶವಿದೇಶಗಳಿಂದ ಜನರು ಆಗಮಿಸುತ್ತಾರೆ. ■



ಚೈನಾ ಟೌನ್‌ನ ಒಂದು ಅಲಂಕೃತ ಬೀದಿ